Reg. No. | | | | | | | | |

**BCMKAL 203**

## Credit Based III Semester B.Com. Degree Examination, Nov./Dec. 2015
## (2014-15 Batch Onwards)
## KANNADA
### ಕನ್ನಡ ಭಾಷಾಪತ್ರಿಕೆ – III

Time : 3 Hours　　　　Max. Marks : 80

### ಭಾಗ – 1 : ಕಾವ್ಯ

I. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ವಿವರವಾಗಿ ಉತ್ತರಿಸಿರಿ : **(1×8=8)**

1) ರನ್ನನ ಕಾವ್ಯಭಾಗದಲ್ಲಿ ಬರುವ ಭೀಮ, ದುರ್ಯೋಧನರ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

2) ಬದುಕು ಮತ್ತು ದೇಹಕ್ಕೆ ಸಂಕೇತವಾಗಿ "ತಂಬೂರಿ" ಶಿಶುನಾಳ ಶರೀಫರ ಕವನದಲ್ಲಿ ಬಳಕೆಯಾಗಿರುವ ರೀತಿಯನ್ನು ವಿವರಿಸಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×6=6)**

1) ಕಣಿವೆಯ ಮುದುಕನ ಮೌನಭಾವಕ್ಕೆ ಕಾರಣವಾದ ಸನ್ನಿವೇಶವನ್ನು ವಿವರಿಸಿ.

2) ಭಕ್ತೋದ್ಧಾರಕ್ಕಾಗಿ ಅಲ್ಲಮ ನಡೆಸಿದ ಲೀಲೆಗಳಲ್ಲಿ ಬಾಲಲೀಲೆಯೂ ಒಂದಾಗಿದ್ದು, ಕವಿ ಅದನ್ನು ಹೇಗೆ ನಿರೂಪಿಸಿದ್ದಾರೆ ?

ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ : **(1×4=4)**

1) ಪಂಜೆ ಮಂಗೇಶರಾವ್

2) ಪು.ತಿ.ನ.

II. ಅ) ಒಂದು ಪದ್ಯಭಾಗದ ಸಂದರ್ಭವನ್ನು ಸೂಚಿಸಿ ಭಾವಸ್ವಾರಸ್ಯವನ್ನು ವಿವರಿಸಿ. **(1×5=5)**

1) ಆ ರವಮಂ ನಿರ್ಜಿತಕಂಠೀರವರವಮಂ ನಿರಸ್ತಘನರವಮಂ ಕೋ
ಪಾರುಣನೇತ್ರಂ ಕೇಳ್ದಾ ನೀರೊಳಗಿರ್ದುಂ ಬೆಮರ್ತನುರಗಪತಾಕಂ

2) ಬೇಡ ನಂಬಿದ ಶುನಕನಿಗೆ ಸ್ಥಳ|
ನೀಡದೀ ರಥ, ಆತ್ಮ ಬಲಕೇಂ|
ಕೇಡೆ ಶುನಕಗೆ, ಬೆದರದೈದಿತುವೈತರಣಿಯನಕ|
ರೂಢಿಗೊಗ್ಗದ ಕಾರ್ಯ ಬೇಡೆಂ|
ದಾಡಿ ವಂದಿಸಿ, ಸುಡುವ ನದಿಯಂ|
ನೋಡಿ, ಬೆದರದೆ ಬಂದಿಳಿದನುತ್ತರಿಪ ಮನದಿಂದ|

ಆ) ಕೆಳಗಿನ ವಾಕ್ಯಗಳಲ್ಲಿ ಎರಡಕ್ಕೆ ಸಂದರ್ಭವನ್ನು ಸೂಚಿಸಿ ಸ್ವಾರಸ್ಯವನ್ನು ವಿವರಿಸಿ. (2×4=8)

1) ತತ್ಸರೋವರದೆರ್ದೆ ಪವ್ವನೆ ಪಾಱುವಂತೆ ಪಾಱಿದವು

2) ಸ್ವಾಮಿ ತೆರಳಿ ಹಳ್ಳಿಯ ಸಾಲೆಗೆ!

3) ಮನದ ಮುಂದಣ ಆಸೆಗಂಜಿದರು

ಇ) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: (4×1=4)

1) ಬಸವಾದಿ ಶರಣರು ಬದುಕಿದ್ದ ಕಾಲ ಯಾವುದು ?

2) 'ಪ್ರಭುಲಿಂಗಲೀಲೆ' ಕೃತಿಯನ್ನು ಬರೆದ ಕವಿ ಯಾರು ?

3) 'ಬೆದರದ್ಯೆದಿತು ವೈತರಣಿಯನಕೆ ಭಾಗವನ್ನು__________ಎಂಬ ಯಕ್ಷಗಾನ ಪ್ರಸಂಗ ಕಾವ್ಯದಿಂದ ಆಯ್ದುಕೊಳ್ಳಲಾಗಿದೆ.

4) 'ಸಾಹಸಭೀಮ ವಿಜಯ' ಕಾವ್ಯದ ಮತ್ತೊಂದು ಹೆಸರೇನು ?

## ಭಾಗ – 2 : ಕಾದಂಬರಿ

III. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಉತ್ತರಿಸಿರಿ: (1×8=8)

1) ಕೃಷ್ಣೇಗೌಡನ ಆನೆ ಅಪರಾಧಿಯಾಗುತ್ತಾ ಹೋದ ಬಗೆ ಹೇಗೆ ?

2) ಕಾದಂಬರಿ ಚಿತ್ರಿಸುವ ವಿವಿಧ ವ್ಯವಸ್ಥೆಗಳ ಅವ್ಯವಸ್ಥೆಗಳನ್ನು ವಿಶದೀಕರಿಸಿರಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ: (1×5=5)

1) ಮೂಡಿಗೆರೆಯಲ್ಲಿ ಕಂತ್ರಿನಾಯಿಗಳ ಸಂಬಂಧವಾಗಿ ಉಂಟಾದ ರಾದ್ಧಾಂತವೇನು ?

2) ವೇಲಾಯುಧನ ದುರಂತವನ್ನು ವಿವರಿಸಿರಿ.

ಇ) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿರಿ: (2×1=2)

1) ಚಲನಚಿತ್ರಗಳಾಗಿ ಹೆಸರು ಮಾಡಿದ ತೇಜಸ್ವಿಯವರ ಯಾವುದಾದರೂ ಒಂದು ಕತೆಯ ಹೆಸರು ಬರೆಯಿರಿ.

2) ತೇಜಸ್ವಿಯವರು ತಮ್ಮ ತಂದೆಯ ಬದುಕು ಮತ್ತು ವ್ಯಕ್ತಿತ್ವವನ್ನು ಕುರಿತು ಬರೆದ ಪುಸ್ತಕದ ಹೆಸರೇನು ?

## ಭಾಗ – 3 : ಗದ್ಯ

IV. ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿರಿ: (1×8=8)

1) ಬುದ್ಧಗುರು ತಿಳಿಸಿಕೊಟ್ಟ ಅನಾತ್ಮ, ಅನಿತ್ಯ ಮತ್ತು ಪ್ರಕ್ರಿಯೆ ಎಂಬ ಮೂರು ಸಂಗತಿಗಳನ್ನು ಸರಳವಾಗಿ ವಿವರಿಸಿ.

2) ಜೀವಂತ ದೃಷ್ಟಾಂತಗಳನ್ನು ಕೊಡುವ ಮೂಲಕ ಷಡಕ್ಷರಿಯವರು ವ್ಯಕ್ತಿತ್ವ ವಿಕಸನದ ಮೌಲ್ಯಗಳನ್ನು ಹೇಗೆ ಪ್ರತಿಪಾದಿಸಿದ್ದಾರೆ ?

ಆ) ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×5=5)

1) ಎದೆಹಾಲು ಮಗುವಿನ ಜೀವನಕ್ಕೆ ಹೇಗೆ ಪ್ರಾಮುಖ್ಯ ? ಆದರೆ ಅದು ಹೇಗೆ ವಾಣಿಜ್ಯೀಕರಣಗೊಂಡಿದೆ ?

2) ವಿವಿಧ ಬಗೆಯ ಹಾಡುಗಳೇ ಜನಪದರ ಜೀವಾಳ ಎಂಬುದನ್ನು ದೇವು ಹನೆಹಳ್ಳಿಯವರು ಹೇಗೆ ವಿವರಿಸಿದ್ದಾರೆ ?

ಇ) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ಪಾಣಾರಾಟ ಎಂದರೇನು ?

2) 'ಅಂತಃಕರಣ' ಪ್ರಬಂಧದ ಲೇಖಕರು ಯಾರು ?

## ಭಾಗ – 4 : ಕ್ರಿಯಾತ್ಮಕ ಕನ್ನಡ

V. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ : (1×8=8)

1) ಕನ್ನಡ ವ್ಯಂಗ್ಯಚಿತ್ರದ ಸಂದರ್ಭ ಮತ್ತು ನಿಲುವನ್ನು ನಿರೂಪಿಸಿ.

2) 'ಶುಭಾಶಯ!' ವ್ಯಂಗ್ಯಚಿತ್ರವು ವಿಡಂಬಿಸುವ ವಿಷಯವನ್ನು ಆ ವ್ಯಂಗ್ಯಚಿತ್ರದ ಎಲ್ಲಾ ಅಂಶಗಳೊಂದಿಗೆ ವಿವರಿಸಿ.

ಆ) ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಕಾರ್ಟೂನಿನ ಹುಟ್ಟನ್ನು ಕುರಿತು ವಿವರಿಸಿ.

2) ಭಾರತದಲ್ಲಿ ವ್ಯಂಗ್ಯಚಿತ್ರದ ಕಿರುನೋಟವನ್ನು ಕುರಿತು ವಿವರಿಸಿ.

ಇ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : (2×1=2)

1) ಭಾರತದ ವ್ಯಂಗ್ಯಚಿತ್ರಗಳ ಪಿತಾಮಹ ಯಾರು ?

2) ವ್ಯಂಗ್ಯಚಿತ್ರಕ್ಕೆ 'ಕಾರ್ಟೂನ್' ಪದವನ್ನು ಪ್ರಥಮವಾಗಿ ಬಳಸಿದವರು ಯಾರು ?